**ಇಂದು ದಿನಾಂಕ 03.07.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ವಾಟೀ ಸವಾಲುಃಶ್ರೀ ಎಲ್ ಕೆ ಆರ್ ಪ್ರತಿವಾದಿ ನಂ.1 ರ LRs ಪರವಾಗಿಃ**

2. ನಾನು ಪ್ರತಿವಾದಿಯರಿಂದ ಅಗಸ್ಟ್ 2006 ನೇ ಇಸವಿಯಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೇನೆ. ಎಷ್ಟು ಪ್ರತಿಫಲಕ್ಕೆ ಕ್ರಯಕ್ಕೆ ಪಡೆದಿದ್ದೇನೆ ಮತ್ತು ಯಾವ ರೂಪೇನ ಪ್ರತಿಫಲವನ್ನು ನೀಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಕ್ರಯ ಪತ್ರಕ್ಕೆ ವಿಜಯಕುಮಾರ ಅವರ ಪತ್ನಿ ಮತ್ತು ಮಕ್ಕಳ ಸಹಿಯನ್ನು ಪಡೆದಿರುತ್ತೇನೆ, ಅದರೆ ಸದರಿ ವಿಜಯಕುಮಾರನ ಮುಖ್ಯಾರುನಾಮದಾರರು ಸದರಿ ಕ್ರಯ ಪತ್ರಕ್ಕೆ ಅವರ ಪರವಾಗಿ ಸಹಿ ಮಾಡಿರುತ್ತಾರೆ. ಪ್ರತಿಫಲವನ್ನು ಸದರಿಯವರ ಪತ್ನಿ ಮತ್ತು ಮಕ್ಕಳ ಕೈಗೆ ಕೊಟ್ಟಿರುತ್ತೇನೆ ಆದರೆ ಎಷ್ಟು ಮೊತ್ತ ಎಂದು ನೆನಪು ಬರುತ್ತಿಲ್ಲ. GPA ಗೆ ವಿಜಯಕುಮಾರ ಅವರ ಪತ್ನಿ ಮತ್ತು ಮಕ್ಕಳ ಸಹಿಗಳು ಇವೆಯೋ ಇಲ್ಲವೋ ನನಗೆ ಗೊತ್ತಿಲ್ಲ.

3. ನರಸಿಂಹಯ್ಯನಿಗೆ ಸದರಿ ಸ್ವತ್ತು ಹೇಗೆ ಬಂತು ಎಂದು ನನ್ನ ಪತ್ರದಲ್ಲಿ ಉಲ್ಲೇಖಿಸಿಲ್ಲ ಎಂದರೆ ನಿಜ. ಸದರಿ ನರಸಿಂಹಯ್ಯನಿಗೆ GPA ಮುಖಾಂತರ ದಾವಾ ಸ್ವತ್ತು ಬಂದಿದೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. GPA ಯಾವ ದಿನಾಂಕದಂದು ಆಗಿದೆ ಎಂದು ಕ್ರಯ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರಕ್ಕೆ ಮಾಹಿತಿಯನ್ನು ವಿಜಯಕುಮಾರ ಅವರ ಪತ್ನಿ ಮತ್ತು ಮಕ್ಕಳು ಕೊಟ್ಟಿರುತ್ತಾರೆ.

4. GPA ದಿನಾಂಕ 18-07-2003 ರಂದು ಆಗಿರುತ್ತದೆ ಎಂದರೆ ನಿಜ. ಅದರಲ್ಲಿ ವಿಜಯಕುಮಾರ ಇವರ ವಯಸ್ಸು 43 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅವರ ಪತ್ನಿ ಮತ್ತು ಮಕ್ಕಳ ವಯಸ್ಸು ಎಷ್ಟು ನಮೂದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ GPA ಬರೆದುಕೊಟ್ಟರೆ ಸದರಿ ಸ್ವತ್ತಿನ ಮಾಲೀಕರು ಪುನಃ GPA ಮಾಡುವ ಕ್ರಯ ಪತ್ರಗಳಿಗೆ ಸಹಿ ಹಾಕುವುದಿಲ್ಲ ಎಂದರೆ ನಿಜ. ವಿಜಯಕುಮಾರ ಅವರ ಪತ್ನಿ ಮತ್ತು ಮಕ್ಕಳಿಗೆ ದುಡ್ಡು ಕೊಟ್ಟಿರುವ ಕಾರಣ ನನ್ನ ಹೆಸರಿಗೆ GPA ಮಾಡಿಕೊಳ್ಳಲು ಅಡಚಣೆ ಇರಲಿಲ್ಲ ಎಂದರೆ ಸಾಕ್ಷಿದಾರರು ನಾನು ಅವರಿಗೆ Health issues ಇದ್ದ ಕಾರಣ ಹಣವನ್ನು ಕೊಟ್ಟಿದ್ದೆ ಎನ್ನುತ್ತಾರೆ.

5. GPA ಒಂದನೇ ಮತ್ತು ಎರಡನೇ ಪುಟದಲ್ಲಿ ಹೆಬ್ಬಟ್ಟಿನ ಗುರುತು ಯಾರದು ಎಂದು ಗುರುತಿಸಿಲ್ಲ ಎಂದರೆ ನಿಜ. 9 ನೇ ಪ್ರತಿವಾದಿ ದಿನೇಶ ಕುಮಾರ ಇವರು ವಿಜಯಕುಮಾರ ಅವರ ಮಗ ಎಂದರೇ ನಿಜ. ಸದರಿ ದಿನೇಶ ಕುಮಾರ ಇವರ ಸಹಿ GPA ನ ಒಂದನೇ ಪುಟ ಮತ್ತು ಎರಡನೇ ಪುಟದಲ್ಲಿ ಬೇರೆ ಬೇರೆ ಇರುತ್ತವೆ ಎಂದರೆ ಸಾಕ್ಷಿದಾರರು ಯಾವುದೇ ವ್ಯತ್ಯಾಸ ಇರುವುದಿಲ್ಲ ಎನ್ನುತ್ತಾರೆ. ಸದರಿ ಒಂದನೇ ಪುಟದ ಸಹಿ ಕೊನೆಯ ಪುಟದ ಸಹಿಗೆ ಹೋಲುತ್ತದೆ ಎಂದರೆ ಸರಿ. ಸದರಿ ಸಹಿಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

6. GPA ದಲ್ಲಿ ನರಸಿಂಹಯ್ಯನ ಸಹಿ ಇರುವುದಿಲ್ಲ ಎಂದರೆ ನಿಜ. ಸದರಿ GPA ನಲ್ಲಿ 3 ಸರ್ವೇ ನಂಬರ್‌ಗಳ ಪ್ರತ್ಯೇಕ ವಿಸ್ತೀರ್ಣ ನಮೂದು ಮಾಡಿಲ್ಲ ಎಂದರೆ ಸಾಕ್ಷಿದಾರರು ಒಟ್ಟು ವಿಸ್ತೀರ್ಣವನ್ನು ನಮೂದು ಮಾಡಿರುತ್ತಾರೆ ಎನ್ನುತ್ತಾರೆ.

7. ದಾವಾ ಸ್ವತ್ತಿನಲ್ಲಿ ನಾನು ಬೋರು ಬಾವಿಯನ್ನು ಹಾಕಿಸಿರುತ್ತೇನೆ ಎಂದರೆ ನಿಜ. ಈ ಕುರಿತು ದಾಖಲೆಗಳನ್ನು ಕೊಟ್ಟಿಲ್ಲ. ದಾವಾ ಸ್ವತ್ತಿನಲ್ಲಿ ಯಾವುದೇ ಕಟ್ಟಡಗಳನ್ನು ಕಟ್ಟಿಲ್ಲ. ದಾವಾ ಸ್ವತ್ತು 2006 ರಲ್ಲಿ ನನ್ನ ಹೆಸರಿಗೆ ಖಾತೆ ಬಂತು. ಸದರಿ ಸ್ವತ್ತಿನ ಕುರಿತು ಪ್ರತಿವಾದಿ ನಂ.1 ಜಗನ್ನಾಥ ಉಪವಿಭಾಧಿಕಾರಿ ಕಚೇರಿಯಲ್ಲಿ RA No. 543/2005-06 ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ನಿಜ. ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ ಅಂದರೆ ನಿಜ. ಅದನ್ನು ಪ್ರಶ್ನಿಸಿ ಜಿಲ್ಲಾಧಿಕಾರಿ ಮುಂದೆ ಮೇಲ್ಮನವಿಯನ್ನು ಹೂಡಿರುತ್ತಾರೆ ಎಂದರೆ ನಿಜ. ಸದರಿ ಮೇಲ್ಮನವಿ ಜಿಲ್ಲಾಧಿಕಾರಿಗಳು ಪುರಸ್ಕರಿಸಿದ್ದಾರೆ ಎಂದರೆ ನಿಜ. ಸದರಿ ಆದೇಶದ ಪ್ರಕಾರ ಪಹಣಿ ಪತ್ರಿಕೆಗಳಲ್ಲಿ ಪುನಃ ಜಾನ್ನಾಥ ರೆಡ್ಡಿ ಇವರ ಹೆಸರು ನಮೂದು ಆಯಿತು ಎಂದರೆ ನಿಜ.

8. ಪ್ರಸ್ತುತ ದಾವೆಯನ್ನು ನಾನು 14 ಜನರ ಮೇಲೆ ಹೂಡಿದ್ದೇನೆ. ದಾವಾ ಆಸ್ತಿಯ ಖಾತೆಯನು ನನ್ನ ಹೆಸರಿಗೆ ಮಾಡಬೇಕೆಂದು ಪುನಃ ಕೇಳಿರುತ್ತೇನೆ. ದಾವಾ ಆಸ್ತಿ ಮೂಲತಃ ವಿಜಯಕುಮಾರ ಇವರಿಗೆ ಸೇರಿದ್ದು ಎಂದರೆ ನಿಜ. ಸದರಿಯವರು ಜಾಲ ಹೋಬಳಿ ಸುಗ್ಗಟ್ಟ ಗ್ರಾಮದವರು ಎಂದರೆ ನಿಜ. ಸದರಿಯವರು ತಮಿಳುನಾಡಿನ ಚೆನ್ನೈಯಲ್ಲಿ ವಾಸವಿದ್ದರು ಎಂದರೆ ಸುಳ್ಳು. 2 ನೇ ಪ್ರತಿವಾದಿ ಮಮತಾ ಎಂದರೆ ನಿಜ. ಸದರಿಯವರು ಸಹ ಸುಗ್ಗಟ್ಟ ಗ್ರಾಮದ ವಾಸ್ಥವ್ಯರು ಎಂದರೆ ನಿಜ. ಇಬ್ಬರು ಒಂದೇ

ಗ್ರಾಮದವರು ಇರುವ ಕಾರಣ ವಿಜಯಕುಮಾರ ಇವರು ಮಮತಾ ಅವರ ಹೆಸರಿಗೆ ದಾವಾ ಸ್ವತ್ತಿನ ಸಂಬಂಧ ನೋಂದಾಯಿತ GPA ಅನ್ನು ಚೆನ್ನೈನಲ್ಲಿ ಮಾಡಿಕೊಟ್ಟರು ಎಂದರೆ ಸುಳ್ಳು. GPA ಮುಖಾಂತರ 1 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿದಾರರು ಉಪವಿಭಾಧಿಕಾರಿ ಕಚೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ ನಂತರ ಸದರಿ ವಿಷಯ ಸಂಗತಿ ಗೊತ್ತಾಯಿತು ಎನ್ನುತ್ತಾರೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**